# ನವ'ಚೇತನ'



ಚೇತನ್ ಎಂದಕೂಡಲೇ ನೆನಪಿಗೆ ಬರುವುದು 'ಆ ದಿನಗಳು' ಸಿನಿಮಾ. 'ಸೂರ್ಯಕಾಂತಿ' ಹಾಗೂ 'ಮೈನಾ' ಅವರ ಅಭಿನಯದ ಇನ್ನೆರಡು ಪ್ರಮುಖ ಚಿತ್ರಗಳು. ಪ್ರತಿ ಪಾತ್ರದಲ್ಲೂ ವೈವಿಧ್ಯತೆಯನ್ನು ಸಾಧಿಸಿರುವ ಚೇತನ್ ನಟನೆಯ ಹೊಸ ಸಿನಿಮಾ 'ಅತಿರಥ' ಈಗ ಚಿತ್ರಮಂದಿರಗಳ ಹೊಸ್ತಿಲಲ್ಲಿದೆ (ನ. 24ರಂದು ತೆರೆಗೆ).

ಮಹೇಶ್ ಬಾಬು ಚಿತ್ರದ ನಿರ್ದೇಶಕರು. ನವಿರು ಪ್ರೇಮಕಥೆಯ ಚಿತ್ರಗಳಿಗೆ ಅವರು ಪ್ರಸಿದ್ಧರು. ಬಾಬು ಜೊತೆಗೇ 'ಆಕಾಶ್', 'ಅರಸು', 'ಮೆರವಣಿಗೆ' ಚಿತ್ರಗಳು ನೆನಪಾಗುತ್ತವೆ. ಮೂರೂ ಚಿತ್ರಗಳು ತಮ್ಮ ಲವಲವಿಕೆಯ ಕಾರಣದಿಂದ ಚಿತ್ರರಸಿಕರ ಗಮನಸೆಳೆದಿದ್ದವು. ಯುವ ನಿರ್ದೇಶಕರ ಗದ್ದಲದಲ್ಲಿ ಕೊಂಚ ಮಂಕಾದಂತಿದ್ದ ಬಾಬು ಅವರೀಗ 'ಅತಿರಥ' ಮೂಲಕ ಮತ್ತೆ ಗಾಂಧಿನಗರದಲ್ಲಿ ಸುದ್ದಿಯಲ್ಲಿದ್ದಾರೆ.

ಕಥನದ ದೃಷ್ಟಿಯಿಂದ 'ಅತಿರಥ' ಮಹೇಶ್ ಬಾಬು ಅವರಿಗೆ ಭಿನ್ನವಾದ ಸಿನಿಮಾ. ಪ್ರೇಮಕಥನ ಪ್ರಧಾನವಲ್ಲದ ಈ ಚಿತ್ರ ಕುಪಿತ ನಾಯಕನೊಬ್ಬನ ಬದುಕಿನ ಕಥೆ ಒಳಗೊಂಡಿದೆ. ಇದು ದೃಶ್ಯಮಾಧ್ಯಮವೊಂದರ ಪತ್ರಕರ್ತನ ಕಥನ. ಶಿಕ್ಷಣ ಕ್ಷೇತ್ರದಲ್ಲಿನ ಹುಳುಕುಗಳನ್ನು ಹೊರಗೆಡಹುವ ಪಾತ್ರವದು. ಈ ಪಾತ್ರ ನಾಯಕನಟ ಚೇತನ್ರ ವ್ಯಕ್ತಿತ್ವಕ್ಕೂ ಹೊಂದುವಂತಿದೆ. ನಿಜ ಜೀವನದಲ್ಲೂ ಜನಪರ ಚಳವಳಿಗಳ ಜೊತೆಗೆ ಗುರ್ತಿಸಿಕೊಂಡಿರುವ ಚೇತನ್, ಚಿತ್ರದಲ್ಲೂ ಅಂತಹುದೇ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಲತಾ ಹೆಗಡೆ ಚಿತ್ರದ ನಾಯಕಿ.

ಥಾಯ್ಲೆಂಡ್‌ನಲ್ಲಿ ಹಾಡುಗಳನ್ನು ಚಿತ್ರೀಕರಿಸುವ ಮೂಲಕ ಸಿನಿಮಾಕ್ಕೊಂದು ರಮಣೀಯ ಸ್ಪರ್ಶ ನೀಡಲು ನಿರ್ದೇಶಕರು ಪ್ರಯತ್ನಿಸಿದ್ದಾರೆ. ಸಮಕಾಲೀನ ಸಮಸ್ಯೆಯೊಂದನ್ನು ಪ್ರಸ್ತಾಪಿಸುವ ಈ ಸಿನಿಮಾ ರಂಜನೆಯ ದೃಷ್ಟಿಯಿಂದಲೂ ಮುಖ್ಯವಾದುದು ಎಂದು ಚಿತ್ರತಂಡ ಹೇಳಿಕೊಂಡಿದೆ.



# ಭೂತದ ಕಥೆಯೂ ಮಂತ್ರದಂಡವೂ..

ಶೀರ್ಷಿಕೆಯಲ್ಲೇ ಸೆಳೆತ ಹೊಂದಿರುವ ಸಿನಿಮಾ 'ಮಂತ್ರಂ'. ಏನಿದು ಮಂತ್ರ? ಇದೇನು ಭೂತಚೇಷ್ಟೆಯ ಕಥನವಾ ಎಂದು ಪ್ರಶ್ನಿಸಿದರೆ ನಿರ್ದೇಶಕ ಸಜ್ಜನ್ 'ಇಲ್ಲ' ಎನ್ನುವುದಿಲ್ಲ. ಚಿತ್ರದ ಟ್ರೇಲರ್ ಕೂಡ ದೆವ್ವದ ಕಥೆಯ ಸುಳಿವನ್ನೇ ನೀಡುತ್ತದೆ. ತಮ್ಮದು ಹಾರರ್ ಸಿನಿಮಾ ಎನ್ನುವುದನ್ನು ಒಪ್ಪಿಕೊಳ್ಳುತ್ತಲೇ ನಿರ್ದೇಶಕರು ಹೇಳುವ ಮಾತು – 'ಮಂತ್ರಂ, ನೀವು ಅಂದುಕೊಂಡಷ್ಟೇ ಅಲ್ಲ'.

ಸದ್ಯಕ್ಕೆ ಚಾಲ್ತಿಯಲ್ಲಿರುವ ಹಾರರ್ ಚಿತ್ರಗಳಿಗಿಂತಲೂ 'ಮಂತ್ರಂ' ಭಿನ್ನವಾಗಿದೆಯಂತೆ. ವಿಭಿನ್ನವಾದ ಎಳೆಯೊಂದು ಚಿತ್ರದಲ್ಲಿದೆ ಎನ್ನುತ್ತಾರೆ ಸಜ್ಜನ್. ಆದೇನು ವಿಶೇಷ ಎಂದು ಕೆಣಕಿದರೆ ಅವರು ಹೇಳುವುದಿಷ್ಟು: 'ನಮ್ಮೆದುರಿಗಿನ ಸಮಸ್ಯೆಗಳನ್ನು ಪರಿಹರಿಸುವ ನಿಟ್ಟಿನಲ್ಲಿ ನಮ್ಮ ಯೋಚನೆಗಳು ಬಹಳಷ್ಟು ಸಂದರ್ಭದಲ್ಲಿ ಸಮರ್ಪಕವಾಗಿರುವುದಿಲ್ಲ. ತೊಡಕುಗಳಿಂದ ಹೊರಬರಲು ನಮಗೊಂದು ಮಂತ್ರ ಬೇಕು. ಈ ನಿಟ್ಟಿನಲ್ಲಿ ಸಿನಿಮಾ ಸಾಗುತ್ತದೆ'.

ಚಿತ್ರೀಕರಣ ನಡೆಯುವ ಸಂದರ್ಭದಲ್ಲಿ ಅನಿರೀಕ್ಷಿತ ಘಟನೆಗಳನ್ನು ಚಿತ್ರತಂಡ ಎದುರಿಸಿತಂತೆ. ಶೂಟಿಂಗ್ ಸಮಯದಲ್ಲಿ ನಮ್ಮ ತಂಡದ ಒಂಬತ್ತು ಮಂದಿ ಗಾಯಗೊಂಡಿದ್ದರು ಎಂದು ನಿರ್ದೇಶಕರು ಹೇಳಿರುವುದು ಕೂಡ ಸಿನಿಮಾದ ಬಗ್ಗೆ ಕುತೂಹಲ ಕೆರಳಿಸುವಂತಿದೆ.

ಪಲ್ಲವಿ ರಾಜು ಹಾಗೂ ಶಮಂತ್ ಶೆಟ್ಟಿ ಚಿತ್ರದ ನಾಯಕಿ–ನಾಯಕ. ಶಮಂತ್‌ಗಿದು ಚೊಚ್ಚಿಲ ಸಿನಿಮಾದ ಅನುಭವ. ಪಲ್ಲವಿ ಈಗಾಗಲೇ ಕ್ಯಾಮೆರಾ ಎದುರಿಸಿರುವ ಅನುಭವಿ. ರಾಯಚೂರು ಹಾಗೂ ಬೆಂಗಳೂರಿನ ಪರಿಸರದಲ್ಲಿ ಶೂಟಿಂಗ್ ನಡೆದಿದೆ. ರಶೀದ್ ಖಾನ್ ಹಾಗೂ ರವಿ ಬಸ್ರೂರು ಸಂಗೀತ ಚಿತ್ರಕ್ಕಿದೆ. ಛಾಯಾಗ್ರಹಣ ರಾಜಶೇಖರ್ ಅವರದು.

■ ರಘು